ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

# ಪಶುವೈದ್ಯಕೀಯ ಮಹಾವಿದ್ಯಾಲಯ

ಜಾನುವಾರು ಸಕಾಣಿಕಾ ಸಂಕೀರ್ಣ

ಸಂಖ್ಯೆ: ಡೀನ್/ಪವೈಮ(ಬೀ)/ರಸಮೇವುಪ್ರ/೨೦೨೦-೨೧ ದಿನಾಂಕ 29-08-2020

Veterinary College, BIDAR
Sl. No: 406 Date: 29/8/2020

## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವದೇನೆಂದರೆ ಪಶುವೈದ್ಯಕೀಯ ಮಹಾವಿದ್ಯಾಲಯ, ನಂದಿನಗರ (ಕಮಠಾಣಾ ಹತ್ತಿರ), ಬೀದರ ಆವರಣದ **ಪ್ಲಾಟ ಸಂಖ್ಯೆ: ಸಿ-೦೧** ಸಿದ್ದೀ ವಿನಾಯಕ ದೇವಸ್ಥಾನದ ಹತ್ತೀರ ಮತ್ತು **ಪ್ಲಾಟ ಸಂಖ್ಯೆ: ಸಿ-೦೨** ನಂದಗೋಕುಲ ಅತಿಥಿ ಗೃಹದ ಹತೀರದಲ್ಲಿ ಬೆಳೆದು ನಿಂತ ಗೋವಿನಜೋಳ ಕಟ್ಟಾವು ಮಾಡುವುದು, ತುಂಬುವ, ಇಳಿಸುವ, ಸಾಗಣೆ ಮಾಡುವುದು ಹಾಗೂ ಈ ಮೇವನ್ನು ಮೇವು ತುಂಡರಿಸುವ ಯಂತ್ರದಲ್ಲಿ ತುಂಡರಿಸುವುದು, ಅದೆ ಮೇವನ್ನು ಸಮೀಪದ ರಸಮೇವಿನ ಗುಂಡಿಯಲ್ಲಿ ಹಂತ ಹಂತವಾಗಿ ಬೆಲ್ಲದ ಹಾಗೂ ಉಪ್ಪಿನ ದ್ರಾವಣವನ್ನು ಸಿಂಪಡಿಸಿ ತುಳಿಯುವುದು, ಗುಂಡಿ ತುಂಬಿದ ನಂತರ ನೀರು ಹಾಗೂ ಗಾಳಿಯಾಡದ ಹಾಗೆ ಚಪ್ಪಡಿ ಕಲ್ಲು ಹಾಕ್ಕಿ ನೀರು ಛಿಮುಕಿಸಿ ಗಟ್ಟಿಯಾಗಿ ತುಳದ ನಂತರ ಸೆಗಣಿಯಿಂದ ಸಾರಿಸಿ ತಗಡಿನ ಶೀಟುಗಳಿಂದ ಮುಚ್ಚುವುದು, ಈ ಎಲ್ಲ ಕೆಲಸಗಳಿಗೆ ಇಚ್ಚೆಯುಳ್ಳವರು ದರ ನಮೂದಿಸಿ, ತಮ್ಮ ಮೊಬೈಲ್ ಸಂಖ್ಯೆಯನ್ನು ಲಕೋಟೆಯ ಮೇಲೆ ಬರೆದು ಮುಚ್ಚಿದ ಲಕೋಟೆಯಲ್ಲಿ **ದಿನಾಂಕ ೧೪-೦೯-೨೦೨೦ ರ ಒಳಗಾಗಿ ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ,** ಬೀದರ ಇವರ ವಿಳಾಸಕ್ಕೆ ಅಂಚೆ ಮುಖಾಂತರ ತಲುಪಿಸಬೇಕು. ತಡವಾಗಿ ಬಂದ ಲಕೋಟೆಗಳನ್ನು ಪರಿಗಣಿಸುವದಿಲ್ಲಾ.

ಲಕೋಟೆಯ ಮೇಲೆ **"ರಸಮೇವಿನ ದರ ಪತ್ರ"** ಎಂದು ನಮೂದಿಸಬೇಕು. ಹೆಚ್ಚಿನ ಮಾಹಿತಿಗಾಗಿ **ಡೀನ್ ಹಾಗೂ ಉಗ್ರಾಣ ಮೇಲ್ವಿಚಾಕರು ಉಗ್ರಾಣ ವಿಭಾಗ ಪಶುವೈದ್ಯಕೀಯ ಮಹಾವಿದ್ಯಾಲಯ,** ಬೀದರ ಇವರನ್ನು ಸಂಪರ್ಕಿಸಬಹುದು.

**ಷರತ್ತುಗಳು :**

- ರಸಮೇವಿನ ಗುಂಡಿ ಒಳಗಡೆ ಸ್ವಚ್ಚತೆ, ಹಾಗೂ ಸುಣ್ಣದ ಲೇಪನೆ ಮಾಡುವುದು.
- ರಸಮೇವಿನ ಗುಂಡಿ ಸುತ್ತಲು ಯಾವುದೆ ಕಳೆ ಇರದಂತೆ ಸ್ವಚ್ಚಗೊಳಸುವುದು.
- ಮೇವು ತುಂಡರಿಸುವ ಯಂತ್ರಕ್ಕೆ ಅವಶ್ಯಕತೆ ಅನುಸಾರ ರೀಪೆರಿ ಕೆಲಸ ನೋಡಿಕೊಳುವುದು.
- ರಸಮೇವು ತಯಾರಿಸುವ ಕೆಲಸ ಒಂದು ವಾರದ ಒಳಗಡೆ ಪೂರ್ತಿಗೊಳಿಸುವ ನಿಟ್ಟಿನಲ್ಲಿ ನಿರಂತರವಾಗಿ ಮಾಡುವುದು
- ಮಳೆ ಬಂದಾಗ ತುಂಡರಿಸಿದ ಮೇವು ಒದ್ದೆ ಆಗದ ಹಾಗೆ ನೋಡಿಕೊಳ್ಳುವುದು.
- ಹಣ ಪಾವತಿ .ವಿಶ್ವವಿದ್ಯಾಲಯ ನಿಯಮಾವಳಿಗಳ ಪ್ರಕಾರ ಜರುಗಿಸಲಾಗುವುದು.
- ದರ ಪತ್ರದಲ್ಲಿ ತಿದ್ದುಪಡಿ ಮಾಡಕೂಡದು. ತಮ್ಮ ಮುಬೈಲ್ ಸಂಖ್ಯೆ ನಮೂದಿಸುವುದು.
- ಕರ್ನಾಟಕ ಪಶುವೈದ್ಯಕೀಯ ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ .ವಿಶ್ವವಿದ್ಯಾಲಯದ ಸಿಬ್ಬಂದಿ ಹಾಗು ಸಂಬಂಧಿಕರು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಈ ಸರಬರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಕೂಡದು.
- ಯಾವುದೇ ಕಾರಣ ನೀಡದೆ ಅಂಗೀಕರಿಸುವ/ತಿರಸ್ಕರಿಸುವ ನಿರ್ಧಾರ ಡೀನ್ ಪ.ವೈ.ಮ ಬೀದರ ಹೊಂದಿರುತ್ತಾರೆ.
- ಯಾವುದೇ ತಕರಾರು ಇದ್ದಲ್ಲಿ ಅಂತಿಮ ಡೀನ್ ಪ.ವೈ.ಮ ಬೀದರ ಇವರದ್ದಾಗಿರುತ್ತದೆ.

ಡೀನ್,
ಪಶುವೈದ್ಯಕೀಯ ಮಹಾವಿದ್ಯಾಲಯ,
ನಂದಿನಗರ (ಬೀದರ.)
ಪಶುವೈದ್ಯಕೀಯ ಮಹಾವಿದ್ಯಾಲಯ,

**ಪ್ರತಿಗಳನ್ನು :**

೧. ಸಹಾಯಕ ನಿರ್ದೇಶಕರು, ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ, ಸುದ್ದಿ ರೂಪದಲ್ಲಿ ಮುದ್ರಣ ಮಾಧ್ಯಮದಲ್ಲಿ ಮಾಹಿತಿ ಪ್ರಚಾರ ಪಡಿಸಲು ಕೋರಲಾಗಿದೆ.

೨. ಪಂಚಾಯತ ಅಭಿವೃಧಿ ಅಧಿಕಾರಿ/ಗ್ರಾಮ ಪಂಚಾಯತ/ ಕಾರ್ಯದರ್ಶಿ, ಕಮಠಾಣಾ/ಯದ್ಲಾಪೂರ/ಕೋಳಾರ(ಕೆ) ಇವರ ಮಾಹಿತಿಗಾಗಿ.

೩. ಕ.ಪ.ಪ.ಮಿ.ವಿ.ವಿ. ಬೀದರ ವೆಬಸೈಟ್ನಲ್ಲಿ (ಅಂತರಜಾಲ) ಅಪ್ಲೋಡ್ ಮಾಡಲು ತಿಳಿಸಲಾಗಿದೆ.

೪. ಪ.ವೈ.ಮ. ಬೀದರ ಸೂಚನಾ ಫಲಕ..

೫. ಕಛೇರಿ ಕಡತಕ್ಕೆ.